ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ
ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. 6/2026**
**ದಿನಾಂಕ : 07.05.2026**

ಫಿರ್ಯಾದುದಾರರು : ರಾಜ್ಯದ ಪರವಾಗಿ ಗೋಣಿಬೀಡು ಪೊಲೀಸರು.

ವಿರುದ್ಧ

ಆರೋಪಿತರು : ಶ್ರೀ. ಮಹೀಂದ್ರ ಎ.ಬಿ
ಬಿನ್. ಬೈರಪ್ಪ
60 ವರ್ಷ ವಯಸ್ಸು,
ವಾಸಃ ಅಬಚೂರು ಗ್ರಾಮ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ದೋಷಾರೋಪಣೆ

ಶ್ರೀ. ಪ್ರಕಾಶ್ ಪಿ.ಎಂ., ಎಂ.ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಮೂಡಿಗೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಮಾಡುತ್ತಿದ್ದೇನೆ.

ದಿನಾಂಕ: 29.10.2025 ರಂದು ಮಧ್ಯಾಹ್ನ 3.00 ರ ಸುಮಾರಿನಲ್ಲಿ ಗೋಣಿಬೀಡು ಪೊಲೀಸ್ ಠಾಣಾ ವ್ಯಾಪ್ತಿಯ ಅಬಚೂರು ಗ್ರಾಮದಲ್ಲಿರುವ ಆರೋಪಿಯಾದ ನೀವು ನಿಮ್ಮ ವಾಸದ ಮನೆಯ ಮುಂಭಾಗದ ಅಂಗಳದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ Select Indian Bag Piper XXX Rum ಕಂಪನಿಯ 180 ಎಂ.ಎಲ್. ನ 5 ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳು, Bag Piper Deluxe whiskey ಕಂಪನಿಯ 180 ಎಂ.ಎಲ್. ನ 2 ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳು, Old Tavern whiskey ಕಂಪನಿಯ 180 ಎಂ.ಎಲ್. ನ 4 ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳು, John’s Original Choice Deluxe whiskey ಕಂಪನಿಯ 90 ಎಂ.ಎಲ್. ನ 5 ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳು, Windsor Deluxe whiskey smooth blend ಕಂಪನಿಯ 90 ಎಂ.ಎಲ್. ನ 5 ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳು, Amrut’s Silver Cup Rare Indian Brandy ಕಂಪನಿಯ 90 ಎಂ.ಎಲ್. ನ 10 ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳು ಅವುಗಳ ಒಟ್ಟು ಪ್ರಮಾಣ 3780 ಎಂ.ಎಲ್ ಮತ್ತು ಒಟ್ಟು

ಮೌಲ್ಯ ರೂ.2,205/- ಗಳ ಮದ್ಯವನ್ನು ಅಕ್ರಮವಾಗಿ ದಾಸ್ತಾನು ಇರಿಸಿಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುತ್ತೀರಿ, ಆದ್ದರಿಂದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾಹರ್ವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆದ್ದರಿಂದ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೆಶಿಸಿದ್ದೇನೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಮೂಡಿಗೆರೆ.

ಆರೋಪಣೆ

1. ಮೇಲಿನ ಆರೋಪಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರಃ

2. ಆರೋಪಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ-

ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ

ಮೂಡಿಗೆರೆ.